ವಸತಿ ಶಾಲೆಗಳ ಅಧ್ಯಾಪಕರನ್ನು ಖಾಯಂಗೊಳಿಸುವುದು

2734 (3637); ಶ್ರೀ ಮೋಹಿಯುದ್ದಿನ್ ಬಾವಾ .ಬಿ.ಎ (ಮಂಗಳೂರು ನಗರ ಉತ್ತರ)

ಅ) ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ವಸತಿ ಶಾಲೆಗಳ ಅಧ್ಯಾಪಕರ ಖಾಯಂಮಾತಿ ಇನ್ನೂ ನಡೆದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಬಗ್ಗೆ ಅಧ್ಯಾಪಕರ ಖಾಯಂಮಾತಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)

ಅ) 2011–12ನೇ ಸಾಲಿನಲ್ಲಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿನ 503 ವಸತಿ ಶಾಲೆಗಳಿಗೆ ಬೋಧಕ ಮತ್ತು ಕೆಲವೊಂದು ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮೋದಿಸಿದೆ. ಈ ಪೈಕಿ 43 ಅಲ್ಪಸಂಖ್ಯಾತರ ವಸತಿ ಶಾಲೆಗಳನ್ನು ಹೊರತು ಪಡಿಸಿ ಬಾಕಿ ಉಳಿದ 460 ವಸತಿ ಶಾಲೆಗಳಿಗೆ 5060 ಬೋಧಕ ಹುದ್ದೆಗಳನ್ನು ಹಾಗೂ 704 ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು 2012–13 ಸಾಲಿನಲ್ಲಿ ಕ್ರಮವಹಿಸಿದೆ. ಪ್ರಸ್ತುತ 3177 ಬೋಧಕ ಸಿಬ್ಬಂದಿಗಳು ಹಾಗೂ 496 ಬೋಧಕೇತರ ಸಿಬ್ಬಂದಿಗಳು ಖಾಯಂ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಹುದ್ದೆಗಳು ಖಾಲಿ ಇರುತ್ತವೆ.

ಆ) ಈ ಹಿಂದೆ ಜಿಲ್ಲಾ ಪಂಚಾಯತ್‌ನಿಂದ ನೇಮಕಗೊಂಡ ಹೊರಸಂಪನ್ಮೂಲದ ಬೋಧಕ ಸಿಬ್ಬಂದಿಗಳು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ ಸೇವಾ ಕೃಪಾಂಕ ನೀಡಿ, ನೇಮಕಾತಿ ಮಾಡಿಕೊಳ್ಳುವಂತೆ ಮನವಿ ಮಾಡಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಪರ ತೀರ್ಪು ನೀಡಿದೆ. ಈ

ಹಿನ್ನೆಲೆಯಲ್ಲಿ 2012–13 ಸಾಲಿನಲ್ಲಿ ನೇರ ನೇಮಕಾತಿ ಪಟ್ಟಿಯನ್ನು ಉಚ್ಚ ನ್ಯಾಯಾಲಯದ ತೀರ್ಮಾನದಂತೆ ಪರಿಷ್ಕರಿಸಲು ಕ್ರಮವಹಿಸಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.

ರಾಜ್ಯದ ಮಾಹಿತಿ ತಂತ್ರಜ್ಞಾನ ಕಂಪನಿಗಳು

2735 (3638); ಶ್ರೀ ಮೋಹಿಯುದ್ಧೀನ್ ಬಾವಾ ಬಿ.ವಿ. (ಮಂಗಳೂರು ನಗರ ಉತ್ತರ)

ಅ) ರಾಜ್ಯದಲ್ಲಿರುವ ಮಾಹಿತಿ ತಂತ್ರಜ್ಞಾನ ಕಂಪನಿಗಳ ಒಟ್ಟು ಸಂಖ್ಯೆ ಎಷ್ಟು; ಖಾಸಗಿ–ಸರಕಾರಿ–ಅರೆ ಸರ್ಕಾರಿ ಕಂಪನಿಗಳೆಷ್ಟು;

ಆ) ಈ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಇಂಜಿನೀಯರ್‌ಗಳು ಮತ್ತು ಅವರ ಸರಾಸರಿ ವಯೋಮಾನ ಎಷ್ಟು;

ಇ) ಮಾಹಿತಿ ತಂತ್ರಜ್ಞಾನ ಕಂಪನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕನ್ನಡಿಗರ ಸಂಖ್ಯೆ ಎಷ್ಟು (ವಿವರ ನೀಡುವುದು)?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ರಾಜ್ಯದಲ್ಲಿ ಸುಮಾರು 2500 ಖಾಸಗಿ ಐ.ಟಿ. ಕಂಪನಿಗಳಿವೆ.

ಆ) ಸುಮಾರು 9.5 ಲಕ್ಷ ಸಾಫ್ಟವೇರ್ ತಂತ್ರಜ್ಞರು ಈ ಕಂಪನಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರಲ್ಲಿ ಶೇ.35ರಷ್ಟು ಇಂಜಿನೀಯರ್‌ಗಳಾಗಿದ್ದು, ಅವರುಗಳ ಸರಾಸರಿ ವಯೋಮಾನ 27 ವರ್ಷ ಆಗಿರುತ್ತದೆ.

ಇ) 9.5 ಲಕ್ಷ ಉದ್ಯೋಗಿಗಳಲ್ಲಿ ಶೇ.58ರಷ್ಟು ಕನ್ನಡಿಗರಾಗಿರುತ್ತಾರೆ.